**ಸಾಕ್ಷಿಯನ್ನು ದಿಃ 26.11.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪಿರ್ಯಾದುದಾರರ ಪರ ಶ್ರೀ ಎಂ.ಈ.ಪಿ ವಕೀಲರಿಂದಃ-**

ನಾನು 3 ನೇ ತರಗತಿ ವರೆಗೂ ಓದಿರುತ್ತೇನ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುವುದಿಲ್ಲ. ಲೆಕ್ಕ ಬರೆದುಕೊಳ್ಳಲು ಪೆನ್ ಅನ್ನು ಉಪಯೋಗಿಸುತ್ತಿದ್ದೆ, ಆರೋಪಿ ನನಗೆ ಸುಮಾರು 25 ವರ್ಷಗಳಿಂದ ಪರಿಚಯ. ಆರೋಪಿ ಮತ್ತು ನಾನು ಒಂದೇ ಊರಿನಲ್ಲಿ ಇದ್ದ ಕಾರಣ ಪರಿಚಯ. ನಾನು ಹುಣಸೂರಿನ, ವಿನೋಬಾ ಕಾಲೋನಿಯಲ್ಲಿ ವಾಸ ಇದ್ದ ಬಗ್ಗೆ ದಾಖಲೆ ಇಲ್ಲ,ಆದರೆ ನಾನು ಬಾಡಿಗೆ ಮನೆಯಲ್ಲಿ ಇದ್ದೆ. ನನ್ನ ರೇಶನ್ ಕಾರ್ಡ ಪಾಂಡವಪುರದ ವಿಳಾಸದಲ್ಲಿ ಇರುತ್ತದೆ. ಯಾವ ವ್ಯಕ್ತಿ ಎಲ್ಲಿ ವಾಸ ಮಾಡುತ್ತಾನೊ ಆ ಏರಿಯಾದಲ್ಲಿ ಮಾತ್ರ ಸರ್ಕಾರದಿಂದ ಪಡಿತರ ಚೀಟಿ ಕೊಡುತ್ತಾರೆ ಎಂದರೆ ಸರಿ. ನಾನು ಪಾಂಡವಪುರದಲ್ಲಿ ವಾಸ ಇದ್ದ ಕಾರಣ ಅಲ್ಲಿಯ ವಿಳಾಸಕ್ಕೆ ಕೊಟ್ಟಿದ್ದಾರೆ ಎಂದರೆ ಸರಿ. ಅದೆ ರೀತಿ ಸರ್ಕಾರದಿಂದ ಕೊಟ್ಟಂತಹ ಆಧಾರ್ ಕಾರ್ಡ ಮತ್ತು ಗುರುತಿನ ಚೀಟಿ ಎಲ್ಲವೂ ಪಾಂಡವಪುರದ ವಿಳಾಸ ಇದೆ ಎಂದರೆ ಸರಿ.

ವಿನೋಬಾ ಕಾಲೋನಿಗೂ ಪಾಂಡವಪುರಕ್ಕೂ 70 ಕಿ.ಮೀ ದೂರು ಇದೆ. ವಿನೋಬಾ ಕಾಲೋನಿಯಲ್ಲಿ ನನಗೆ ಸಂಬಂಧಿಕರು ಇದ್ದಾರೆ. ಅದೆ ರೀತಿ ಆರೋಪಿಯೂ ನನ್ನ ಸಂಬಂಧಿ ಎಂದರೆ ಸರಿಯಲ್ಲ. ಆರೋಪಿ ಮತ್ತು ಅವರ ಮಗ ಗುತ್ತಿಗೆ ಕೆಲಸ ಮಾಡುತ್ತಾರೆ ಎಂದರೆ ಸರಿ. ಅದೆ ರೀತಿ ನಾನು ಅವರ ಬಳಿ ಕೆಲಸ ಮಾಡುತ್ತೇನೆ ಎಂದರೆ ಸರಿ. ನಾನು ಮತ್ತು ಆರೋಪಿ ಅತಿ ವಿಶ್ವಾಸದಿಂದ ಇದ್ದೆವೆ ಎಂದರೆ ಸರಿಯಲ್ಲ. ಆರೋಪಿ ನ್ಯಾಯಾಲಯಕ್ಕೆ ಬಂದಾಗಲೆಲ್ಲಾ ಅವರ ಜೊತೆ ನಾನು ಹಲವಾರು ಬಾರಿ ಬಂದಿರುತ್ತೇನೆ ಎಂದರೆ ಸರಿ. ಆರೋಪಿ ಜೊತೆ ಅನ್ಯೂನ್ಯತೆಯಿಂದ ಮತ್ತು ತುಂಬಾ ವಿಶ್ವಾಸದಿಂದ

ಇದ್ದೇನೆ ಎಂದರೆ ಸರಿ. ಆರೋಪಿ ಯಾವುದೆ ವ್ಯವಹಾರ ಮಾಡಿದರೂ ಅಂದರೆ ಹಣಕಾಸಿನ ವ್ಯವಹಾರ ಮಾಡಿದರೆ ನನ್ನನ್ನು ಕರೆದುಕೊಂಡು ಹೋಗುತ್ತಾರೆ.

ಆರೋಪಿಯ ಮೇಲೆ ಎಷ್ಟು ಕೇಸ್ ಗಳನ್ನು ಹಾಕಿದ್ದಾರೆ ಎಂದರೆ ಇದೊಂದು ಕೇಸ್ ಎನ್ನುತ್ತಾರೆ. ಪಿರ್ಯಾದುದಾರರು ಮತ್ತು ಆರೋಪಿ ಒಳ್ಳೆಯ ಸ್ನೇಹಿತರು ಎಂದರೆ ನನಗೆ ಗೊತ್ತಿಲ್ಲ. ಆರೋಪಿ ಜೊತೆ ಕೆಲಸ ಮಾಡುತ್ತಿರುವ ನಾಗರಾಜು ಮತ್ತು ಗೋವಿಂದೇಗೌಡ ಒಳ್ಳೆಯ ಸ್ನೇಹಿತರು ಎಂದರೆ ಅವರು ಕಾಂಟ್ರ್ಯಾಕ್ಟರ್ ಇರುತ್ತಾರೆ ಅದರೆ ಸ್ನೇಹಿತರು ಇರುವುದಿಲ್ಲ ಎನ್ನುತ್ತಾರೆ. ಪ್ರಮಾಣ ಪತ್ರದಲ್ಲಿ ಏನು ಬರೆಸಿ ಹಾಕಿದ್ದಾರೆ ಎಂದು ನಿಖರವಾಗಿ ಹೇಳಲು ಆಗುತ್ತೇಯೆ ಎಂದರೆ ಚೆಕ್‌ನ ವಿಷಯ ಬರೆದು ಹಾಕಿದ್ದಾರೆ ಎನ್ನುತ್ತಾರೆ. ನನಗೆ ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳಲು ಆರೋಪಿ ಬರಲು ಹೇಳಿದರು. ವ್ಯವಹಾರ ಆಯಿತು ಎಂದು ಹೇಳುವ ಸ್ವಾಮಿಶೆಟ್ಟಿರವರನ್ನು ನಾನು ನೋಡಿರುತ್ತೇನೆ. ಸ್ವಾಮಿಶೆಟ್ಟಿರವರ ತಂದೆ ಹೆಸರು ಗೊತ್ತಿಲ್ಲ. ಆದರೆ ಮೈಸೂರಿನಲ್ಲಿ ವಾಸವಿರುತ್ತಾರೆ. ಮೈಸೂರಿನಲ್ಲಿ ನಿಖರವಾಗಿ ಎಲ್ಲಿ ವಾಸ ಇದ್ದಾರೆ ಎಂದು ನನಗೆ ಗೊತ್ತಿಲ್ಲ. ಸ್ವಾಮಿಶೆಟ್ಟಿ ರವರು ಆರೋಪಿಯ ಮೂಲಕ 2021 ರಲ್ಲಿ ಮೈಸೂರಿನ ಹಿನಕಲ್ ನಲ್ಲಿ ಪರಿಚಯ ಆಗಿರುತ್ತಾರೆ. ಅವರು ಹಿನಕಲ್ ನ ಸಿಟಿ ಪೊಲೀಸ್ ಆಗಿ ಕೆಲಸ ಮಾಡುತ್ತಿದ್ದರು. ಯಾವ ಠಾಣೆಯೆಂದು ನನಗೆ ಗೊತ್ತಿಲ್ಲ. 2021 ನೇ ಸಾಲಿನಲ್ಲಿ ಹಿನಕಲ್ ನ ಸರ್ಕಲ್ ನಲ್ಲಿ ಯಾವುದೆ ಟ್ರಾಫಿಕ್ ಸರ್ಕಲ್ ಇರಲಿಲ್ಲ ಎಂದರೆ ಸರಿಯಲ್ಲ.

ಹಿನಕಲ್ ನ ಹೊಟೇಲ್ ಒಂದರಲ್ಲಿ ವ್ಯವಹಾರ ಆಗಿರುತ್ತದೆ. ಹೊಟೇಲ್ ಹೆಸರು ನನಗೆ ನೆನಪಿಲ್ಲ. ಹಣ ಕೊಟ್ಟಿದ್ದರೂ ಎಂದು ಹೇಳುವ ಕಾಲಕ್ಕೆ ನಾನು ಮತ್ತು ಆರೋಪಿ ಇದ್ದೇವು. ಯಾವ ಬ್ಯಾಂಕ್ ನ ಚೆಕ್ ಅನ್ನು ಕೊಟ್ಟರು ಎಂದು ನನಗೆ ಗೊತ್ತಿಲ್ಲ. ಅದರ ನಂಬರ್ ಸಹ ನನಗೆ ಗೊತ್ತಿಲ್ಲ. 2021 ನೇ ಸಾಲಿನಲ್ಲಿ ಹಣ ತೆಗೆದುಕೊಂಡಿದ್ದು, ದಿನಾಂಕ ಗೊತ್ತಿಲ್ಲ, ಆದರೆ 12 ನೇ ತಿಂಗಳಲ್ಲಿ ವಾಪಸ್ಸು

ಕೊಟ್ಟಿರುತ್ತೇವೆ. ಹಣ ತೆಗೆದುಕೊಂಡು ವಾಪಸ್ಸು ಕೊಟ್ಟ ಬಗ್ಗೆ ಯಾವುದೆ ಬರವಣಿಗೆ ಆಗಿರುವುದಿಲ್ಲ. ಸ್ವಾಮಿ ಶೆಟ್ಟಿ ಚೆಕ್ ತೆಗೆದುಕೊಂಡು ಮೋಸ ಮಾಡಿರುತ್ತಾರೆ ಎಂದು ನಾನಾಗಲಿ ಆರೋಪಿ ಆಗಲಿ ಆತನ ವಿರುದ್ಧ ಯಾವುದೆ ಮೇಲಾಧಿಕಾರಿಗೆ ದೂರನ್ನು ಕೊಟ್ಟಿಲ್ಲ. ಹಾಗೆ ದೂರು ಕೊಡಲು ಯಾವುದಾದರೂ ತೊಂದರೆ ಇತ್ತಾ ಎಂದರೆ ಅವರು ಸ್ನೇಹಿತರಾದ ಕಾರಣ ಕೊಡುತ್ತಾರೆ ಎಂಬ ನಂಬಿಕೆ ಇತ್ತು ಎನ್ನುತ್ತಾರೆ. ಸ್ವಾಮಿಶೆಟ್ಟಿ ರವರನ್ನು ಕರೆಸಿ ಸಾಕ್ಷಿ ಹೇಳಿಸಲು ಆಗುತ್ತದೆಯೆ ಎಂದರೆ ಅವರು ಬರುವುದಿಲ್ಲ ಎನ್ನುತ್ತಾರೆ. ಆರೋಾಪಿ ಮತ್ತು ಅವರ ಮಗ ಗುತ್ತಿಗೆ ಕೆಲಸದಿಂದ ಎಷ್ಟು ಆದಾಯ ಮತ್ತು ಎಷ್ಟು ಖರ್ಚು ಮಾಡುತ್ತಾರೆ ಎಂದು ನನಗ ಗೊತ್ತಿಲ್ಲ ಸದರಿ ರವರು ಅವರ ಕಾಂಟ್ರ್ಯಾಕ್ಟ ಕೆಲಸಕ್ಕೆ ಯಾರ್ಯಾರಿಂದ ಸಾಲ ಪಡೆದುಕೊಂಡು ಬಂಡವಾಳ ಹಾಕಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಆರೋಪಿಗೆ 1/2 ಎಕರೆ ಜಮೀನು ಇರುವುದು ಗೊತ್ತು, ಒಟ್ಟು ಎಷ್ಟು ಇದೆ ಎಂದು ನನಗೆ ಗೊತ್ತಿಲ್ಲ. ಆರೋಪಿತನ ವ್ಯಯಕ್ತಿಕವಾಗಿ ಏನೆಲ್ಲಾ ವ್ಯವಹಾರ ಮಾಡುತ್ತಾನೆ ಎಂದು ನನಗೆ ಗೊತ್ತಿಲ್ಲ. ಸ್ವಾಮಿಶೆಟ್ಟಿ ಈಗ ಎಲ್ಲಿ ವಾಸ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ.

ಆರೋಪಿಗೆ ಹಲವಾರು ಬ್ಯಾಂಕ್ ಗಳಲ್ಲಿ ಚೆಕ್ ತೆಗೆದುಕೊಂಡು ವ್ಯವಹಾರ ಮಾಡುತ್ತಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿ ಗುತ್ತಿಗೆ ಕೆಲಸಕ್ಕಾಗಿ ಹಲವಾರು ಜನರ ಬಳಿ ಸಾಲ ತೆಗೆದುಕೊಡಯಿ ವ್ಯವಹಾರ ಮಾಡುತ್ತಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಸ್ವಾಮಿಶೆಟ್ಟಿ ರವರು ಪರಿಚಯ ಇಲ್ಲ, ಅವರು ಅಪರಿಚಿತ ವ್ಯಕ್ತಿ ಎಂದರೆ ಸರಿಯಲ್ಲ. ಸ್ವಾಮಿಶೆಟ್ಟಿ ಮತ್ತು ಆರೋಪಿಗೂ ಯಾವುದೆ ಹಣಕಾಸಿನ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ. ಅವರಿಂದ ಆರೋಪಿ ಯಾವುದೆ ಸಾಲ ಪಡೆದಿರಲಿಲ್ಲ, ಅದರ ಸಂಬಂಧ ಯಾವುದೆ ಚೆಕ್ ಸಹ ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ಯಾವುದೆ ವ್ಯವಹಾರ ನಡೆಯದೆ ಕಾರಣ ಸ್ವಾಮಿಶೆಟ್ಟಿ ರವರಗೆ ಈ ಪ್ರಕರಣದ ಚೆಕ್ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಸ್ವಾಮಿಶೆಟ್ಟಿ ಮತ್ತು ಆರೋಪಿ ನವೆ ಯಾವುದೆ ವ್ಯವಹಾರ ಆಗದ ಕಾರಣ ಸಾಲ ತೀರಿಸುವ

ಯಾವುದೆ ಪ್ರಮೇಯ ಬರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಕೈ ಕಳಗೆ ನಾನು ಕೆಲಸ ಮಾಡುತ್ತಿದ್ದರಿಂದ ಇಲ್ಲಿ ಬಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿದಂತೆ ಯಾವುದೆ ವ್ಯವಹಾರ ನಡೆಯದೆ ಇದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವಿನೋಬಾ ಕಾಲೋನಿಯಲ್ಲಿ ವಾಸ ಮಾಡುತ್ತಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಗೆ ಸಹಾಯ ಮಾಡಲು ನನಗೆ ಯಾವುದೆ ವಿಷಯ ಗೊತ್ತಿಲ್ಲದಿದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.